| ಕ್ರ: ಸಂ: | ತಾಲ್ಲೂಕು | ಜಿಲ್ಲೆಯಲ್ಲಿ ಇರುವ ಒಟ್ಟು ಪ್ರಾಥಮಿಕ ಶಾಲೆಗಳ ಸಂಖ್ಯೆ | ಶೌಚಾಲಯ ವ್ಯವಸ್ಥೆ ಇಲ್ಲದಿರುವ ಶಾಲೆಗಳ ಸಂಖ್ಯೆ | ಆಟದ ಮೈದಾನ ಇಲ್ಲದಿರುವ ಶಾಲೆಗಳ ಸಂಖ್ಯೆ |
|---|---|---|---|---|
| 1. | ಬಂಟ್ವಾಳ | 143 | 86 | 80 |
| 2. | ಬೆಳ್ತಂಗಡಿ | 154 | 65 | 43 |
| 3. | ಕಾರ್ಕಳ | 179 | 146 | 90 |
| 4. | ಕುಂದಾಪುರ | 258 | 206 | 41 |
| 5. | ಮಂಗಳೂರು | 147 | 15 | 41 |
| 6. | ಪುತ್ತೂರು | 171 | 152 | 106 |
| 7. | ಸುಳ್ಯ | 132 | 55 | 17 |
| 8. | ಉಡುಪಿ | 145 | 71 | 60 |
| | ಒಟ್ಟು | 1329 | 796 | 478 |

ಇ) 'ಅಕ್ಷಯ' ಯೋಜನೆಯಡಿಯಲ್ಲಿ ಆಟದ ಮೈದಾನ ಒದಗಿಸುವುದು ಒಂದು ಕಾರ್ಯಕ್ರಮವಾಗಿದ್ದು. ಹಂತ ಹಂತವಾಗಿ 8ನೇ ಪಂಚವಾರ್ಷಿಕ ಯೋಜನೆಯಡಿಯಲ್ಲಿ ಪೂರೈಕೆಮಾಡಲಾಗುವುದು. 1993-94ರಲ್ಲಿ 5000 ಶಾಲೆಗಳಿಗೆ ಪೂರೈಕೆ ಮಾಡಲು ರೂ. 3.00 ಕೋಟಿಗಳನ್ನು ಒದಗಿಸಲಾಗಿದೆ. ಹಾಗೂ 1994-95ರಲ್ಲಿ ರೂ. 3.00 ಕೋಟಿಗಳನ್ನು ಒದಗಿಸಿಕೊಳ್ಳಲಾಗಿದೆ.

ಶೌಚಾಲಯಗಳಿಗೆ ನೀರು ಪೂರೈಕೆಗಾಗಿ ಕಾರ್ಯಕ್ರಮ ಹಾಕಿಕೊಂಡು ಪೂರೈಕೆ ಮಾಡುವ ಯೋಜನೆಯನ್ನು ರೂಪಿಸಲಾಗುತ್ತಿದೆ.

**ನ್ಯಾಮತಿಯಲ್ಲಿ ಸರ್ಕಾರಿ ಹೆಣ್ಣುಮಕ್ಕಳ ಕಾಲೇಜನ್ನು ಪ್ರಾರಂಭಿಸುವುದು**

223 - ಶ್ರೀ ಡಿ.ಬಿ. ಗಂಗಪ್ಪ (ಹೊನ್ನಾಳಿ) : ಮಾನ್ಯ ಪ್ರಾಥಮಿಕ ಹಾಗೂ ಪ್ರೌಢ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

*ಅ) ಹೊನ್ನಾಳಿ ತಾಲ್ಲೂಕಿನ ನ್ಯಾಮತಿಯಲ್ಲಿ ಸರ್ಕಾರಿ ಕಾಂಪೋಜಿಟ್ ಹೆಣ್ಣುಮಕ್ಕಳ ಜೂನಿಯರ್ ಕಾಲೇಜು ಯಾವಾಗ ಪ್ರಾರಂಭಿಸಲಾಗುವುದು.*

*ಆ) 1994-95ರಲ್ಲಿ ಅದನ್ನು ಪ್ರಾರಂಭಿಸಲಾಗುವುದೇ?*

ಶ್ರೀಮತಿ ನಾಗಮ್ಮ ಸಿ. ಕೇಶವಮೂರ್ತಿ (ಪ್ರಾಥಮಿಕ ಹಾಗೂ ಪ್ರೌಢಶಿಕ್ಷಣ ಸಚಿವರು) :

ಅ) ಪ್ರಸ್ತಾವನೆ ಸರ್ಕಾರದ ಪರಿಶೀಲನೆಯಲ್ಲಿದೆ. ಪರಿಶೀಲಿಸಿ ಸೂಕ್ತ ಕ್ರಮ ತೆಗೆದುಕೊಳ್ಳಲಾಗುವುದು.

ಆ) ಇಲ್ಲ

**ಭದ್ರಾ ಅರಣ್ಯದಲ್ಲಿ ವಾಸಿಸುವ ಜನರ ಸ್ಥಳಾಂತರ**

237 - ಶ್ರೀಮತಿ ಮೋಟಮ್ಮ (ಮೂಡಿಗೆರೆ) : ಮಾನ್ಯ ಅರಣ್ಯ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

*ಅ) ಚಿಕ್ಕಮಗಳೂರು ಜಿಲ್ಲೆಯ ಭದ್ರಾ ಅರಣ್ಯದಲ್ಲಿ ವಾಸಿಸುವ ಜನರನ್ನು ಸ್ಥಳಾಂತರಿಸುವ ಬಗ್ಗೆ ಸರ್ಕಾರ ಕೈಗೊಂಡ ಕ್ರಮವೇನು?*